**CW : 3**

PW : 3

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.1094/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ರಸಾದ್ |
| ತಂದೆಯ ಹೆಸರು | : | ಶಂಕರ್ ಭಟ್ |
| ಪ್ರಾಯ | : | 55 ವರ್ಷ |
| ಉದ್ಯೋಗ | | ಕೃಷಿ |
| ವಾಸಸ್ಥಳ | : | ಕೊಚ್ಚಿ ಮನೆ , ಅಮ್ಚಿನಡ್ಕ ಗ್ರಾಮ, ಪುತ್ತೂರು ತಾ. |

ದಿನಾಂಕಃ **08.10.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ಚಾಸಾ-1 ರವರ ಪರಿಚಯ ಇದೆ. ಅವರು ನಮ್ಮ ಮನೆಯ ಪಕ್ಕದವರು. ನಾನು ಅವರಿಗೆ ಸೇರಿದ ತೋಟವನ್ನು ನೋಡಿಕೊಳ್ಳುತ್ತೇನೆ. ನನ್ನ ಸಂಗಡ ನಾರಾಯಣ ಮೂಲ್ಯ ಎಂಬುವವರೂ ಕೂಡಾ ಚಾಸಾ-1 ರವರಿಗೆ ಸೇರಿದ ತೋಟವನ್ನು ನೋಡಿಕೊಳ್ಳುತ್ತಾರೆ. ಮುಖ್ಯವಾಗಿ ಚಾಸಾ.1 ರವರ ತೋಟದಲ್ಲಿ ಅಡಿಕೆ ಕೃಷಿ ಮಾಡಲಾಗುತ್ತದೆ. ಚಾಸಾ-1 ರವರಿಗೆ ಒಬ್ಬ ಗಂಡು ಮಗ ಹಾಗು ಇಬ್ಬರು ಹೆಣ್ಣು ಮಕ್ಕಳು. ಚಾಸಾ-1 ರವರ ಗಂಡು ಮಗ ಪುತ್ತೂರಿನಲ್ಲಿ ವಾಸ ಮಾಡುತ್ತಾನೆ. ಚಾಸಾ-1 ರವರ ಹೆಣ್ಣುಮಕ್ಕಳು ಮದುವೆಯಾಗಿ ಒಬ್ಬರು ಬೆಂಗಳೂರಿನಲ್ಲಿ ಹಾಗೂ ಇನ್ನೊಬ್ಬರು ಉಡುಪಿಯಲ್ಲಿ ವಾಸ ಮಾಡುತ್ತಾರೆ. ಚಾಸಾ-1 ರವರ ಪತ್ನಿ ಮೃತರಾಗಿರುತ್ತಾರೆ. ಚಾಸಾ-1 ರವರ ಮನೆಯಲ್ಲಿ ಅವರೊಬ್ಬರೇ ವಾಸ ಮಾಡುತ್ತಾರೆ. ಚಾಸಾ-1 ರವರ ತೋಟದಿಂದ ಬರುವ ಅಡಿಕೆ ಫಸಲನ್ನು ಚಾಸಾ-1 ರವರ ಮನೆಯ ಪಕ್ಕದಲ್ಲಿ ಪ್ರತ್ಯೇಕವಾಗಿ ಇರುವ ಉಗ್ರಾಣದಲ್ಲಿ ಶೇಖರಿಸಿ ಇಡಲಾಗುತ್ತಿತ್ತು.

ದಿ. 19-07-2023 ರಂದು ಚಾಸಾ-1 ರವರು ಪುತ್ತೂರಿನಲ್ಲಿನ ತಮ್ಮ ಮಗನ ಮನೆಗೆ ಬಂದಿದ್ದರು. ಆ ದಿನ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ-1 ರವರು ತಮ್ಮ ಮನೆಯಿಂದ ಪುತ್ತೂರಿಗೆ ಹೋದರು. ದಿ. 03-08-2023 ರಂದು ಚಾಸಾ-1 ರವರು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ವಾಪಸ್ಸು ತಮ್ಮ ಮನೆಗೆ ಬಂದರು. ಅವರು ಬಂದ ನಂತರ ಪರಿಶೀಲಿಸಿದಾಗ ಉಗ್ರಾಣದಲ್ಲಿನ ಬೀಗವನ್ನು ಮುರಿದು ಉಗ್ರಾಣದಲ್ಲಿ ಶೇಖರಿಸಿಟ್ಟಿದ್ದ ಸುಲಿಯದ 10 ಮೂಟೆ ಅಡಿಕೆ ಕಳುವಾಗಿದ್ದು ಕಂಡುಬಂತು. ಆಗ ನಮ್ಮನ್ನೆಲ್ಲಾ ಚಾಸಾ-1 ರವರು ಸ್ಥಳಕ್ಕೆ ಕರೆಸಿ ವಿಚಾರಣೆ ಮಾಡಿದರು. ನಾನು ಅಲ್ಲಿ

ಹೋಗಿ ನೋಡಿದಾಗ ಸುಮಾರು 10 ಪ್ಲಾಸ್ಟಿಕ್ ಚೀಲಗಳಲ್ಲಿ ಶೇಖರಿಸಿ ಇಡಲಾಗಿದ್ದ ಸುಲಿಯದ ಅಡಿಕೆ ಮತ್ತು ಹುಲ್ಲು ಕತ್ತರಿಸುವ ಯಂತ್ರ ಉಗ್ರಾಣದಿಂದ ಕಳುವಾಗಿದ್ದು ಕಂಡುಬಂತು. ಸದರಿ ಸುಲಿಯದ ಅಡಿಕೆ ಸುಲಿದಿದ್ದರೆ ಸುಮಾರು 1 ಕ್ವಿಂಟಾಲ್ 15-20 ಕೆಜಿ ಅಡಿಕೆಯಾಗುತ್ತಿತ್ತು. ಅದರ ಮೌಲ್ಯ 55 ರಿಂದ 60 ಸಾವಿರ ಆಗುತ್ತಿತ್ತು. ಹುಲ್ಲು ಕತ್ತರಿಸುವ ಯಂತ್ರದ ಮೌಲ್ಯ 6-7 ಸಾವಿರ ಆಗಿತ್ತು.

ಕಳವು ಮಾಡಲಾಯಿತು ಎಂದು ಹೇಳಲಾದ ದಿನ ಸ್ಥಳದಲ್ಲಿ ಕಿರಣ ಮತ್ತು ಸಂತೋಷ್ ಎನ್ನುವವರು ಓಮ್ನಿ ಕಾರಿನಲ್ಲಿ ತಿರುಗಾಡುತ್ತಿದ್ದುದು ನೆರೆಹೊರೆಯವರಿಂದ ಗೊತ್ತಾಯಿತು. ದಿ.04-08-2023 ರಂದು ಅಡಿಕೆ ಕಳುವಾಗಿದ್ದ ಸ್ಥಳಕ್ಕೆ ಪೋಲೀಸರು ಕಿರಣ್‌ಕುಮಾರ್, ಸಂತೋಷ್ ರನ್ನು ಕರೆದುಕೊಂಡು ಬಂದು ಮಹಜರ್ ಕ್ರಮ ಜರುಗಿಸಿದರು. ಸ್ಥಳದಲ್ಲಿ ಕಿರಣ್, ಸಂತೋಷ್ ರವರು ಅಡಿಕೆಯನ್ನು ಕಳವು ಮಾಡಿದ ಬಗ್ಗೆ ಒಪ್ಪಿಕೊಂಡರು.

ಪೋಲೀಸರು ಆ ದಿನ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಬಂದಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 1 ಮತ್ತು 2 ನೇ ಆರೋಪಿತರನ್ನು ನ್ಯಾಯಾಲಯದ ಸಮ್ಮುಖ ನೋಡಿ ಗುರುತಿಸಿರುತ್ತಾರೆ. ದಿ. 12-09-2023 ರಂದು ಸಂಪ್ಯದ ಪೊಲೀಸ್ ಠಾಣೆಯಲ್ಲಿ ಕಿರಣ್, ಸಂತೋಷ ಹಾಗೂ ಮೊಹಮದ್ ಸಿನಾನ್ ನ್ನು ಪೋಲೀಸರು ತೋರಿಸಿದರು. ಮೊಹಮದ್ ಸಿನಾನ್ ಮಾರುತಿ ಓಮ್ನಿ ವಾಹನದ ಮಾಲೀಕ. ಕಿರಣ್, ಸಂತೋಷ ಹಾಗೂ ಮೊಹಮದ್ ಸಿನಾನ್ 3 ಜನ ಸೇರಿ ಕಳ್ಳತನ ಮಾಡಿದ್ದ ಬಗ್ಗೆ ಪೋಲೀಸ್ ಠಾಣೆಯಲ್ಲಿ ಗೊತ್ತಾಯಿತು. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರಿರುವ 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಪೋಲೀಸರು ನನ್ನನ್ನು ಘಟನೆಯ ಸಂಬಂಧ 2 ಬಾರಿ ವಿಚಾರಣೆ ಮಾಡಿದ್ದಾರೆ.

ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಎಮ್ ಪಿ ಕೆ ರವರಿಂದಃ

ಶ್ರೀ ಎಮ್ ಪಿ ಕೆ ರವರು ಸಾಕ್ಷಿಯ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 3**

PW : 3